ಬಳೆಯಾಕಾರದ ಇನ್ನೊಂದೋ ಅಗಲವಾಗಿ ಸಿಂಬೆಯಾಗಿರುತ್ತವೆ. ಪರೀಕ್ಷೆಯ ಕಡೆಯ ಅರ್ಧಗಂಟೆ ವಿದ್ಯಾರ್ಥಿ ಮತ್ತು ಮೇಲ್ವಿಚಾರಕ ಇಬ್ಬರಿಗೂ ಮಹತ್ವದ ಅವಧಿ. ಟ್ವೆಂಟಿ–ಟ್ವೆಂಟಿ ಕ್ರಿಕೆಟ್‌ನಲ್ಲಿರುವಂತೆ ಉತ್ತರಗಳನ್ನು ಸರಸರನೆ ಗೀಚುವುದರಿಂದ ನಮಗೆ ಹೆಚ್ಚುವರಿ ಕಾಗದಗಳನ್ನು ವಿತರಿಸಲು ಎರಡು ಕೈಗಳು ಸಾಲದಾಗುತ್ತವೆ. ಕೆಲವೊಮ್ಮೆ ಹೀಗೆ ಅಂಡೂರುವುದರೊಳಗೆ ಯಾರಾದರೂ ನೀರಿಗಾಗಿಯೋ, ಹೆಚ್ಚುವರಿ ಪತ್ರಿಕೆಗಾಗಿಯೋ ಕರೆಯುತ್ತಾರೆ.

ಮೇಲ್ವಿಚಾರಣೆಯೆನ್ನುವುದು ಒಂದು ಯುದ್ಧದಂತೆ. ಹಾಗಾಗಿ ಸೈನಿಕರಿಗೆ ಇರುವಂತೆ ನಮಗೆ ಆ ಕಾರ್ಯಕ್ಕೆ ತೊಡಗುವ ಮುನ್ನ ಸಾಕಷ್ಟು ಧೈರ್ಯವೂ, ಶೌರ್ಯವೂ ಬೇಕಾಗುತ್ತದೆ. ಭುಜಬಲಿಯೆಂಬ ಹೆಸರುಳ್ಳ ಒಬ್ಬಾತ ಎರಡನೇ ವರ್ಷದ ಹುಡುಗ. ಹೆಸರಿಗೆ ತಕ್ಕಂತೆ ಭಾರೀ ಭುಜಗಳುಳ್ಳವನು. ನೋಡಿದರೆ ಹೆದರಿಕೆಯನ್ನುಂಟು ಮಾಡುವ ಆಕೃತಿ. ನನ್ನ ಗ್ರಹಚಾರಕ್ಕೆ ಆ ದಿವಸ ಅವನ ರೂಮೇ ಮೇಲ್ವಿಚಾರಣೆಗೆ ಬಂದಿತ್ತು. ಪಾಲಿಗೆ ಬಂದಿದ್ದು ಅಮೃತವಲ್ಲವೇ? ಕೌರವರ ವಿಚಿತ್ರವಾದ ವ್ಯೂಹದಂತಿದ್ದ ಆ ಕೊಠಡಿಗೆ ಸಣ್ಣ ಕಾಯದ ಅಭಿಮನ್ಯುವಿನಂತೆ ಮೆಲ್ಲನೆ ಅಡಿಯಿಟ್ಟೆ. ಎಲ್ಲರಿಗೂ ಉತ್ತರ ಪತ್ರಿಕೆಗಳನ್ನು ವಿತರಿಸಿ, ಅದರ ಮೇಲೆ ಬರೆದಿದ್ದ ಸಲಹೆ ಸೂಚನೆಗಳನ್ನು ಗಟ್ಟಿ ದನಿಯಲ್ಲಿ ವದರತೊಡಗಿದೆ. 'ಎಲ್ರೂ ನಿಮ್ಮನಿಮ್ಮ ಕಿಸೆ, ಡೆಸ್ಕು, ಆ ಕಡೆ, ಈ ಕಡೆ ಎಲ್ಲಾ ಸರಿಯಾಗಿ ನೋಡ್ಕೊಳ್ಳಿ. ಏನಾದ್ರೂ ಚೀಟಿಗೀಟಿ ಇದ್ದರೆ ಕಸದ ಬುಟ್ಟಿಗೆ ಹಾಕಿ. ಮೊಬೈಲು, ಸ್ಮಾರ್ಟ್‌ಫೋನು ಎಲ್ಲವನ್ನೂ ನನ್ನ ಬಳಿ ಕೊಟ್ಬಿರಿ. ಪರೀಕ್ಷೆ ಮುಗಿದ ಮೇಲೆ ವಾಪಸ್ ಕೊಂಡು ಹೋಗಿ' ಎಂದು ಬೀದಿಯಲ್ಲಿ ಮೈಕಿನ ಮೂಲಕ ನಾಟಕದ ಪ್ರಚಾರ ಮಾಡುವಂತೆ ಕೊಠಡಿಯ ಕೇಂದ್ರದಲ್ಲಿ ನಿಂತುಕೊಂಡು ಅರುಹಿದೆ. ಕುರಿಗಳು ಆ ಕಡೆ, ಈ ಕಡೆ, ಮುಂದೆ, ಹಿಂದೆ ಎಲ್ಲಾ ನೋಡಿಕೊಂಡವು. ಕೆಲವೊಬ್ಬರು ತಮ್ಮ ಬಳಿಯಿದ್ದ ಫೋನುಗಳನ್ನು 'ಈ ತಿಕ್ಕಲನಿಗೆ ಕೊಡುವುದಕ್ಕಿಂತ ಕೊಠಡಿಯಾಚೆಗೆ ಇದ್ದ ನಮ್ಮ ಬ್ಯಾಗುಗಳಲ್ಲೇ ಇಡುವುದು ವಾಸಿ' ಎಂದುಕೊಂಡವೋ ಏನೋ? ಬಿರಬಿರನೆ ನೋಡುತ್ತಾ ಹೊರಗೆ ಹೋಗಿ ಬಂದವು.

ಸಮಯಕ್ಕೆ ಸರಿಯಾಗಿ ಬೆಲ್ಲಾಯಿತು. ಎಲ್ಲರಿಗೂ ಪ್ರಶ್ನೆ ಪತ್ರಿಕೆಗಳನ್ನು ಕೊಡಲು ಮುಂದಾದೆ. ವಿತರಿಸಿಯಾದ ಮೇಲೆ ಇನ್ನೇನು ಕೆಲಸ? ಕೊಠಡಿಯ ಉದ್ದಗಲಕ್ಕೂ ಬೇತಾಳನನ್ನೆತ್ತಿಕೊಂಡ ವಿಕ್ರಮನಂತೆ ಸುತ್ತು ಹಾಕತೊಡಗಿದೆ. ಸ್ವಲ್ಪ ಹೊತ್ತಿನ ನಂತರ ತಿರುಗಾಟ ಸಾಕಾಗಿ ಮುಖ ಲಕ್ಷಣವನ್ನು ಅಭ್ಯಸಿಸೋಣವೆಂದು ಕುರ್ಚಿಯಲ್ಲಿ ಕುಳಿತು ಎಲ್ಲಾ ವಿದ್ಯಾರ್ಥಿಗಳ ಮೋರೆಯನ್ನು ಅವಲೋಕಿಸುತ್ತಿದ್ದೆ. ಎಲ್ಲರೂ ತಮ್ಮ ಪಾಡಿಗೆ ಇಷ್ಟದ ಭಂಗಿಯಲ್ಲಿ ಬರೆಯುವಲ್ಲಿ ನಿರತರಾಗಿದ್ದರು. ಹೊತ್ತು ಸರಿದಂತೆ ಅವರವರ ಭಂಗಿಗಳು ಬದಲಾಗುತ್ತಿದ್ದವು. ಆದರೆ, ಕೂಲಂಕಷ ಪರಿಶೀಲನೆಯಿಂದ ಗೊತ್ತಾದ ಸಂಗತಿಯೆಂದರೆ ಆಜಾನುಬಾಹುವು ಡೆಸ್ಕಿಗೆ ಆತುಕೊಂಡೇ ಬೆನ್ನನ್ನು ಒಂಚೂರೂ ಬಾಗಿಸದೇ ಕೋಲನ್ನು ಕಟ್ಟಿಕೊಂಡವನಂತೆ ನೇರವಾಗಿ ಕುಳಿತುಕೊಂಡಿದ್ದ. ಭಲೇ ಭಲೇ! ಪರೀಕ್ಷಾ ಕೇಂದ್ರದಲ್ಲಿಯೂ ಯಾವುದೋ ಒಂದು ಆಸನದಲ್ಲಿ ಋಷಿಯಂತೆ ಕುಳಿತುಕೊಂಡು ಬರೆಯುತ್ತಿದ್ದಾನಲ್ಲಾ ಎಂದುಕೊಂಡೆ. ಸೂಕ್ಷ್ಮವಾಗಿ ನೋಡಿದರೆ ಆತನ ಮೋರೆಯು ತುಸು ಗಾಬರಿಯಲ್ಲಿದ್ದಂತಿತ್ತು. ಏನೋ ಇಬಿರಬೇಕೆಂದು ಅಭಿಮನ್ಯುವಿಗೆ ವ್ಯೂಹ ಭೇದಿಸಲು ಕಿಂಡಿ ದೊರಕಿದಂತೆ ಮೇಲೆದ್ದು ಆತನ ಸುತ್ತಲೇ ಠಳಾಯಿಸತೊಡಗಿದೆ. ಸುಸ್ತಾಗಿ ಬೆನ್ನು ಬಾಗುತ್ತಿದ್ದರೂ ಪ್ರಯತ್ನಪೂರ್ವಕವಾಗಿ ಆತನು ಮತ್ತೂ ಮತ್ತೂ ಡೆಸ್ಕಿಗೇ ಆತುಕೊಳ್ಳತೊಡಗಿದನು.

ಈತ ಏನನ್ನೋ ಮುಚ್ಚಿಡುತ್ತಿದ್ದಾನೆ. ಇಲ್ಲವಾದರೆ ಲಂಬೂ ಆದ ಈತ ತನ್ನ ಕೋಲಿನಂತಹ ಕಾಲುಗಳನ್ನು ತೀರಾ ಡೆಸ್ಕಿನ ಕೆಳಗಿಟ್ಟು ಬರೆಯುತ್ತಿರಲಿಲ್ಲ. ಅದು ಶಕ್ಯವೂ ಇರಲಿಲ್ಲ. ಏನನ್ನೋ